ಮೂ. ದಾ. ನಂ. 53/14

ಡಿ.ಡಬ್ಲ್ಯು. 5

(ಇಂದು ದಿನಾಂಕ 24-03-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಜಿ.ಎಚ್. ವಕೀಲರಿಂದಃ**

ವಾದಿ 1 ಮತ್ತು 2 ನೇ ಪ್ರತಿವಾದಿಗಳ ಮಗಳು ಎಂದರೆ ಸರಿ. 3 ರಿಂದ 6 ನೇ ಪ್ರತಿವಾದಿಗಳು 1 ಮತ್ತು 2 ನೇ ಪ್ರತಿವಾದಿಗಳ ಮಕ್ಕಳು ಎಂದರೆ ಸರಿ. 7 ನೇ ಪ್ರತಿವಾದಿ 5 ನೇ ಪ್ರತಿವಾದಿಯ ಗಂಡ ಎಂದರೆ ಸರಿ. ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಯಾವ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂಬ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿಯ ಮನೆ ಹಾಗೂ 3 ನೇ ಪ್ರತಿವಾದಿಯ ಮನೆ ಹಳಕಾರದಲ್ಲಿ ಇದೆ ಎಂದರೆ ಸರಿ. ನಮ್ಮ ಮನೆಯಿಂದ 2 ನೇ ಪ್ರತಿವಾದಿಯ ಮನೆ ಸುಮಾರು 30 ಮೀಟರ್ ಅಂತರದಲ್ಲಿ ಇದೆ. ವಾದಿಯ ಮನೆ ಸಹ ಅದೇ ಅಂತರದಲ್ಲಿ ಇದೆ ಎಂದರೆ ಸರಿ.

ನನ್ನ ತಂದೆಯವರಿಗೆ ಒಟ್ಟು 4 ಜನ ಮಕ್ಕಳಿದ್ದು, 3 ಜನ ಗಂಡು ಮತ್ತು ಒಬ್ಬರು ಹೆಣ್ಣು ಮಗಳು ಇರುತ್ತಾರೆ. ಗಂಡು ಮಕ್ಕಳ ಪೈಕಿ ನಾನೇ ಹಿರಿಯವನಾಗಿರುತ್ತೇನೆ. ಹೆಣ್ಣು ಮಗಳು 2 ನೇಯವರಾಗಿರುತ್ತಾರೆ. ನನ್ನ ತಂದೆಯವರಿಗೆ ಹಳಕಾರ ಗ್ರಾಮದಲ್ಲಿ ಸಾಕಷ್ಟು ಆಸ್ತಿ ಇದೆ ಎಂದರೆ ಸರಿ. ವಾದಿ ಹಾಗೂ 3 ರಿಂದ 6 ನೇ ಪ್ರತಿವಾದಿಗಳು ಒಂದೇ ಊರಿನಲ್ಲಿ ವಾಸ್ತವ್ಯ ಇದ್ದ ಕಾರಣ ಎಲ್ಲರೂ ಆಗಾಗ್ಗೆ 1 ಮತ್ತು 2 ನೇ ಪ್ರತಿವಾದಿಗಳ ಮನೆಗೆ ಹೋಗಿ ಬರುತ್ತಿದ್ದರು ಎಂದರೆ ಸಾಕ್ಷಿಯು 3 ರಿಂದ 6 ನೇ ಪ್ರತಿವಾದಿಗಳು ಹೋಗಿ -ಬರುತ್ತಿದ್ದು, ವಾದಿಯು ಮಾತ್ರ 30 ವರ್ಷಗಳಿಂದ 1 ಮತ್ತು 2 ನೇ ಪ್ರತಿವಾದಿಗಳ ಮನೆಗೆ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ.

ಪ್ರಸ್ತುತ ದಾವೆಗೆ ನನ್ನ ಪರ ಸಲ್ಲಿಸಲಾದ ಲಿಖಿತ ಪ್ರತಿವಾದ ಪತ್ರವನ್ನು ತಯಾರಿಸಲು ನಾನೇ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಪರ ಸಲ್ಲಿಸಲಾದ ಲಿಖಿತ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. 6 ನೇ ಪ್ರತಿವಾದಿ ಹಳಕಾರ ಗ್ರಾಮದಲ್ಲಿ ವಾಸ್ತವ್ಯ ಇದ್ದಾರೆ ಎಂದರೆ ಸರಿ. 4

ರಿಂದ 6 ನೇ ಪ್ರತಿವಾದಿಗಳ ಮಕ್ಕಳು 1 ಮತ್ತು 2 ನೇ ಪ್ರತಿವಾದಿಯರ ಮನೆಗೆ ಹೋಗಿ ಬರುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ತನ್ನ ಎಲ್ಲಾ ಮೊಮ್ಮಕ್ಕಳನ್ನು ಸಮಾನ ರೀತಿಯಲ್ಲಿ ಕಾಣುತ್ತಿದ್ದರು ಎಂದರೆ ಸರಿ.

1 ನೇ ಪ್ರತಿವಾದಿಯು ಅವರಿಗೆ ಗಂಡು ಸಂತತಿ ಇಲ್ಲದ ಕಾರಣ 1999 ನೇ ಸಾಲಿನಲ್ಲಿ ನನ್ನನ್ನು ದತ್ತಕ ತೆಗೆದುಕೊಂಡಿದ್ದು, ನಿರ್ದಿಷ್ಟವಾದ ದಿನಾಂಕವನ್ನು ಹೇಳಲು ನೆನಪಾಗುತ್ತಿಲ್ಲ. ನನ್ನನ್ನು ದತ್ತಕ ಪಡೆದ ಬಗ್ಗೆ ನೋಂದಾಯಿತ ದಾಖಲಾತಿಯನ್ನು ಮಾಡಲಾಗಿತ್ತದೆ. ದತ್ತಕವನ್ನು ಪಡೆಯುವ ಸಂದರ್ಭದಲ್ಲಿ

ಸಂಪ್ರದಾಯಬದ್ಧವಾದ ಹೋಮ-ಹವನಗಳನ್ನು ಮಾಡಿರುವುದಾಗಿ ಕೇಳ್ಪಟ್ಟಿದ್ದು, ನಾನು ಚಿಕ್ಕವನಿದ್ದ ಕಾರಣ ಆ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ.

ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ದಾಖಲಾಗಿದ್ದ ಆಸ್ತಿಗಳಾಗಿದ್ದವು ಎಂದರೆ ಸರಿ. ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿ ಹಾಗೂ ಆತನ ಸಹೋದರರ ನಡುವೆ ನ್ಯಾಯಾಲಯದಲ್ಲಿ ವಿಭಾಗಾಂಶದ ದಾವೆ ದಾಖಲಾಗಿತ್ತು ಎಂದರೆ ಸರಿ. ಸದರಿ ದಾವೆಯ ಸಂಖ್ಯೆ 44/2004 ಆಗಿದ್ದು, ಪ್ರಸ್ತುತ ದಾವೆಯ 1 ನೇ ಪ್ರತಿವಾದಿ ಸದರಿ ದಾವೆಯಲ್ಲಿ ವಾದಿಯಾಗಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆ 44/2004 ದಿನಾಂಕಃ 17-04-2006 ರಂದು ತೀರ್ಮಾನವಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ 1 ನೇ ಪ್ರತಿವಾದಿಗೆ ಅರ್ಧಾಂಶ ಹಾಗೂ ಅಸಲು ದಾವಾ ಸಂಖ್ಯೆ 44/2004 ರ ಪ್ರತಿವಾದಿಗಳಿಗೆ ಅರ್ಧಾಂಶ ಹಕ್ಕು ಇದೆ ಎಂದು ತೀರ್ಮಾನ ಮಾಡಲಾಗಿರುತ್ತದೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 44/2004 ರಲ್ಲಿ ಪ್ರಸ್ತುತ ದಾವೆಯ 1 ನೇ ಪ್ರತಿವಾದಿಯ ಹಿಸ್ಸೆಗೆ ನೀಡಲಾದ ಸ್ವತ್ತುಗಳು ಪ್ರಸ್ತುತ ದಾವೆಯಲ್ಲಿ ನಮೂದಿಸಲಾದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿ. ದಾವಾ 'ಬ' ಅನುಸೂಚಿ ಸ್ವತ್ತು ಅಸಲು ದಾವಾ ಸಂಖ್ಯೆ 44/2004 ರಲ್ಲಿ ಪ್ರಸ್ತುತ ದಾವೆಯ 1 ನೇ ಪ್ರತಿವಾದಿಯ ಹಿಸ್ಸೆಗೆ ನೀಡಲಾದ ಸ್ವತ್ತು ಆಗಿತ್ತು ಎಂದರೆ ಸರಿ.

ನಾನು ಯಾವ ವರ್ಷದಲ್ಲಿ 9 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ಹೇಳಲು ನೆನಪಿಲ್ಲ. ನಾನು ಸುಮಾರು 15 ವರ್ಷಗಳ ಪೂರ್ವದಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ವಾಸ್ತವ್ಯ ಮಾಡುತ್ತಿದ್ದೇನೆ. ಆದರೆ ಸದರಿ ವಾಸ್ತವ್ಯ ಹಾಗೂ ಕೆಲಸ ತಾತ್ಕಾಲಿಕ ಆಗಿರುತ್ತದೆ. 1 ನೇ ಪ್ರತಿವಾದಿಯು ತನ್ನ ಜೀವಿತ ಕಾಲದಲ್ಲಿ ಏನು ವ್ಯವಹಾರಗಳನ್ನು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿ ಹಳಕಾರ ಗ್ರಾಮದಲ್ಲಿ ದೇವಸ್ಥಾನದಲ್ಲಿ ಪೂಜೆ ಮಾಡುವಂತಹ ಹಕ್ಕು ಇತ್ತು ಎಂದರೆ ಸರಿ. 1 ನೇ ಪ್ರತಿವಾದಿಯು ಹಳಕಾರ ಹಾಗೂ ಹೆಗಡೆ ಗ್ರಾಮದಲ್ಲಿರುವ ಗುನಗಾ ಸಮಾಜದವರ ಮುಖ್ಯಸ್ಥರಾಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ದೇವಸ್ಥಾನಗಳಲ್ಲಿ ಪೂಜಾ

ಕೈಂಕರ್ಯಗಳನ್ನು ಮಾಡುತ್ತಿದ್ದ ಕಾರಣ ಅವರಿಗೆ ಸಾಕಷ್ಟು ಆದಾಯದ ಮೂಲಗಳು ಇತ್ತು ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ